**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ971/2018**
**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | **ಅರುಣ್ ಕುಮಾರ್** |
| ತಂದೆಯ ಹೆಸರು | **ಲೇಟ್ ನಾರಾಯಣಪ್ಪ** |
| ವಯಸ್ಸು | **40** |
| ಉದ್ಯೋಗ | **ಗುತ್ತಿಗೆದಾರರು** |
| ವಿಳಾಸ | **ಬಸವನಪುರ** |

**ದಿನಾಂಕಃ 15-06-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿಃ14-12-2017 ರಂದು ಸಂಜೆ 6.15 ರ ಸಮಯದಲ್ಲಿ ಸಾರ್ವಜನಿಕರು ನನಗೆ ಕರೆ ಮಾಡಿ ನನ್ನ ಮಾವನಾದ ನಾರಾಯಣಪ್ಪನವರು ಮಾಗಡಿ ಕಡೆಯಿಂದ ಬರುವಾಗ ಸಂಜೆ 5.30 ರ ಸಮಯದಲ್ಲಿ ತಿಪ್ಪಗೊಂಡನಹಳ್ಳಿ ಡ್ಯಾಮ್ ಬಳಿ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ನಾನು, ಚಾಸಾ-2 ಮತ್ತು 3 ರವರು ಅಪಘಾತ ನಡೆದ ಸಥಳಕ್ಕೆ ಹೋಗಿ ನೋಡಿದಾಗ, ಕಾರು ಮತ್ತು ಬಸ್ಸು ಅಲ್ಲಿಯೇ ಇತ್ತು. ಅಲ್ಲೆ ಇದ್ದ ಸಾರ್ವಜನಿಕರು ಮಾಗಡಿ ಕಡೆಯಿಂದ ಬೆಂಗಳೂರು ಕಡೆಗೆ ನನ್ನ ಮಾವನವರು ಕಾರಿನ ಸಂ. ಕೆಎ-03-ಪಿ-4731 ಹೋಗುತ್ತಿದ್ದಾಗ, ಬೆಂಗಳೂರು ಕಡೆಯಿಂದ ಮಾಗಡಿ ಕಡೆಗೆ ಬರುತ್ತಿದ್ದ ಬಸ್ಸ ನಂ. ಕೆಎ-09-ಎ-6021 ಅತಿವೇಗ ಮತ್ತು ಅಜಗರೂಕತೆಯಿಂದ ಮುಂದೆ ಇರುವ ವಾಹನವನ್ನು ಓವರ್ ಟೇಕ್ ಮಾಡುವ ಸಮಯದಲ್ಲಿ ನನ್ನ ಮಾವನವರ ಕಾರಿಗೆ ಡಿಕ್ಕಿ ಪಡಿಸಿದೆ ಎಂದು ತಿಳಿಸಿರುತ್ತಾರೆ. ಸದರಿ ಅಪಘಾತದಿಂದ ನನ್ನ ಮಾವನವರು ಓಡಿಸುತ್ತಿದ್ದ ಕಾರು ಜಖಂ ಗೊಂಡಿರುತ್ತದೆ ಮತ್ತು ಅವರಿಗೆ ತೀವ್ರಗಾಯ ಮತ್ತು ರಕ್ತಸ್ರಾವ ಆಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ತಾವರೆಕೆರೆ ಪೋ. ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ನಾನು ನೀಡಿದ ದೂರಾಗಿದೆ. ಅದರಲ್ಲಿ ನನ್ನ ಸಹಿ ಇದೆ. ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಪಂಚನಾಮೆ ಆಗಿದೆ. ಅದರಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.ದಿ.14-12-2017 ರಂದು ರಾತ್ರಿ 8.45 ರಿಂದ 9.30 ರ ಸಮಯದಲ್ಲಿ ಪೋಲೀಸರು ಅಪಘಾತ ನಡೆದ ಸ್ಥಳದಲ್ಲಿ ನಿಪಿ-2 ರಂತೆ ಪಂಚನಾಮೆ ಮಾಡಿರುತ್ತಾರೆ. ನಾನು ನಿಪಿ-2 ಕ್ಕೆ ಅಲ್ಲೆ ಸಹಿ ಮಾಡಿರುತ್ತೇನೆ. ನನ್ನ ಜೊತೆ ನಿಪಿ-2 ಕ್ಕೆ ನನ್ನ ಜೊತೆ ಚಾಸಾ-2, 3 ಮತ್ತು 7 ರವರು ಸಹಿ ಮಾಡಿರುತ್ತಾರೆ.

ಪಂಚನಾಮೆ ಮಾಡುವ ಸಮಯದಲ್ಲಿ ಪೋಲೀಸರು ಎರಡೂ ವಾಹನವಾದ ಕಾರು ಮತ್ತು ಬಸ್ಸನ್ನು ಅಮಾನತ್ತು ಮಾಡಿರುತ್ತಾರೆ. ಈಗ ನನಗೆ ಎರಡು ಫೋಟೋಗಳನ್ನು ತೋರಿಸಿದ್ದು, ಸದರಿ ಫೋಟೋಗಳಲ್ಲಿ ಅಪಘಾತಕ್ಕೆ ಒಳಗಾದ ಕಾರಾಗಿದ್ದು, ಅದನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿ ತು. ಈಗ ನನಗೆ ಎರಡು ಪೋಟೋಗಳನ್ನು ತೋರಿಸಿದ್ದು ಸದರಿ ಪೋಟೋಗಳಲ್ಲಿ ಅಪಘಾತಪಡಿಸಿರುವ ಬಸ್ಸು ಇದೆ. ಸದರಿ ಫೋಟೋಗಳನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಗಿದೆ. ಸದರಿ ಅಪಘಾತಕ್ಕೆ ಬಸ್ಸಿನ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯಿಂದ ಬರುತ್ತಿದ್ದ ಕಾರಣದಿಂದ ಅಪಘಾತವಾಗಿದೆ ಎಂದು ತಿಳಿದುಕೊಂಡಿರುತ್ತೇನೆ.

**ಪಾಟೀ ಸವಾಲು :- ಆರೋಪಿ ಪರ ಶ್ರೀ. ಜಿ. ಹೆಚ್. ಎಂ. , ವಕೀಲರಿಂದ :-**

ನಾನು ಎಂ.ಬಿ. ಎ ಪದವಿದಾರನಾಗಿದ್ದೇನೆ. ನನಗೆ ಕನ್ನಡ ಬಾಷೆಯನ್ನು ಓದಲು ಮತ್ತು ಬರೆಯಲು ಬರುತ್ತದೆ. ನಿಪಿ-1 ನ್ನು ನಾನೇ ಬರೆದಿರುತ್ತೇನೆ.

ದಿ.14-12-2017 ರಂದು ಸುಮಾರು 8 ಗಂಟೆ ಸಮಯದಲ್ಲಿ ನಾನು ನಿಪಿ-1 ನ್ನು ಬರೆದುಕೊಟ್ಟಿರುತ್ತೇನೆ. ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ನಾನು ಘಟನೆ ನಡೆದ ಸಮಯದಲ್ಲಿ ಬಸವಪುರದಲ್ಲಿ ಇದ್ದೇನು. ಬಸವಪುರದಿಂದ ಘಟನೆ ನಡೆದ ಸ್ಥಳಕ್ಕೆ ಸುಮಾರು 35 ರಿಂದ 40 ಕಿ. ಮೀ. ನಷ್ಟು ಅಂತರವಿದೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಯಾರೋ ನನಗೆ ಕರೆ ಮಾಡಿ ಅಪಘಾತದ ಬಗ್ಗೆ ತಿಳಿಸಿದರು ಎಂದು ಹೇಳಿರುತ್ತೇನೆ, ಆದರೆ ಅವರ ಹೆಸರು ಮತ್ತು ದೂರವಾಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನನಗೆ 6.10 ರಿಂದ 6.15 ರ ಸಮಯಕ್ಕೆ ಫೋನ್ ಕರೆ ಬಂದಿರುತ್ತದೆ. ನಾನು ಘಟನಾ ಸ್ಥಳಕ್ಕೆ ಬರುವಷ್ಟರಲ್ಲಿ 7.30 ರಿಂದ 7.45 ಗಂಟೆ ಆಗಿರುತ್ತದೆ.

ನಾನು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಮೃತ ನಾರಾಯಣಪ್ಪನವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಮೃತ ನಾರಾಯಣಪ್ಪನವರನ್ನು ನನ್ನ ಸಂಬಂಧಿ ಮತ್ತು ಇನ್ನೊಬ್ಬರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅವರ ಹೆಸರು ಮತ್ತು ವಿಳಾಸ ನನಗೆ ಗೊತ್ತಿಲ್ಲ. ನಾನು ನಿಪಿ-1 ರಲ್ಲಿ ನನ್ನ ಸಂಬಂಧಿಕರು ಮೃತ ನಾರಾಯಣಪ್ಪನವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ಬರೆದಿರುವುದಿಲ್ಲ. ಮೃತ ನಾರಾಯಣಪ್ಪನವರನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ವಿಷಯದ ಬಗ್ಗೆ ನನಗೆ ಗೊತ್ತಾದ ಬಳಿಕ ನಾನು ಆಸ್ಪತ್ರೆಗೆ ಹೋಗಲಿಲ್ಲ, ಪೋ. ಠಾಣೆಗೆ ದೂರನ್ನು ನೀಡಲು ಹೋಗಿರುತ್ತೇನೆ. ಅಪಘಾತ ನಡೆದ ಸಥಳದಿಂದ ಪೋ. ಠಾಣೆಗೆ 14 ರಿಂದ 15 ಕಿ. ಮೀನಷ್ಟು ಅಂತರವಿದೆ. ನನ್ನ ಜೊತೆ ಪೋ. ಠಾಣೆಗೆ ಪ್ರಾಸಾ-2, ಚಾಸಾ-3, 5 ಮತ್ತು 7 ರವರು ಬಂದಿದ್ದರು. ನಾವುಗಳು ಪೋ.ಠಾಣೆಗೆ

ಕಾರಿನಲ್ಲಿ ಹೋಗಿರುತ್ತೇವೆ. ನಾನು ರಾತ್ರಿ 8 ಗಂಟೆಗೆ ಪೋ. ಠಾಣೆಗೆ ಹೋಗಿರುತ್ತೇನೆ. ಮೃತ ನಾರಾಯಣಪ್ಪನವರು ನನಗೆ ಮಾವನಾಗಬೇಕು. ಸದರಿ ಅಪಘಾತವನ್ನು ನಾನು ಖುದ್ದಾಗಿ ನೋಡಿರುವುದಿಲ್ಲ ಮತ್ತು ಅಲ್ಲಿ ಇದ್ದ ಸಾರ್ವಜನಿಕರು ಹೇಳಿದ ಮೇರೆಗೆ ನಿಪಿ-1 ರಂತೆ ದೂರನ್ನು ನೀಡಿರುತ್ತೇನೆ. ನಾನು ಅಪಘಾತ ನಡೆದ ಸ್ಥಳಕ್ಕೆ ಬಂದಾಗ ಅಲ್ಲಿ 10 ರಿಂದ 15 ಜನರಷ್ಟು ಇದ್ದರು. ಅವರು ಯಾರು ಎಂದು ನನಗೆ ಪರಿಚಯವಿಲ್ಲ. ಸದರಿ ಅಪಘಾತವು ಮಾಗಡಿ-ಬೆಂಗಳೂರು ಮುಖ್ಯ ರಸ್ತೆಯಲ್ಲಿ ಆಗಿರುತ್ತದೆ. ಅಪಘಾತ ನಡೆದ ಸ್ಥಳವು ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಪೋಲೀಸರು ಅವರ ವರದಿಯಲ್ಲಿ ಅಪಘಾತ ನಡೆದ ಸ್ಥಳವು ತಿರುವಿನಿಂದ ಕೂಡಿದೆ ಎಂದು ಹೇಳಿದ್ದಾರೆ ಎಂದರೆ ನನಗೆ ಕತ್ತಲೆ ಇದ್ದ ಕಾರಣ ಅಷ್ಟಾಗಿ ಗೊತ್ತಾಗಿರುವುದಿಲ್ಲ. ರಸ್ತೆಯಲ್ಲಿ ತಿರುವು ಇದ್ದಾಗ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ಅಪಘಾತ ನಡೆದ ದಿನದಂದು ನಾರಾಯಣಪ್ಪನವರು ಮಾಗಡಿಯ ದೇವಸ್ಥಾನಕ್ಕೆ ಬಂದು ಮನೆಗೆ ಹೋಗುತ್ತಿದ್ದರು. ಸದರಿ ವಿಷಯದ ಬಗ್ಗೆ ನಿಪಿ-1 ರಲ್ಲಿ ಹೇಳಿರುವ ಬಗ್ಗೆ ನನಗೆ ನೆನಪಿಲ್ಲ.

ಬಸ್ಸು ಬೇರೆ ಗಾಡಿಯನ್ನು ಓವರ್ ಟೇಕ್ ಮಾಡದೇ ಇದ್ದರೂ ಸಹ ನಾನು ಸುಳ್ಳು ಪಿರ್ಯಾದಿಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಘಟನಾ ನಡೆದ ಸ್ಥಳವನ್ನು ನೋಡಿದರೆ ಗೊತ್ತಾಗುತ್ತದೆ ಎಂದು ನುಡಿದಿರುತ್ತಾರೆ. ನಾನು ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿರುವುದು. ಮೃತ ನಾರಾಯಣಪ್ಪನವರು ರಸ್ತೆಯ ಬಲಭಾಗದ ಕಡೆ ಹೋಗುತ್ತಿದ್ದ ಕಾರಣ ಬಸ್ಸು ಬಂದು ಡಿಕ್ಕಿಪಡಿಸಿದೆ ಹೊರತು, ಯಾವುದೇ ಅತಿವೇಗ ಮತ್ತು ಅಜಾಗರೂಕತೆ ಬಸ್ ಕಡೆಯಿಂದ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪೋ. ಠಾಣೆಯಲ್ಲಿ ಎರಡು ಕಡೆ ಸಹಿ ಮಾಡಿರುತ್ತೇನೆ.

ಪೋಲೀಸರು ನನಗೆ ಮಹಜರ್ ಮಾಡುವಾಗ ಹಾಜರಿರಬೇಕು ಎಂದು ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ಆದರೆ ನಾನೇ ಅಲ್ಲಿಗೆ ಹೋಗಿರುತ್ತೇನೆ. ಮಹಜರ್ ಮಾಡುವಾಗ ನನ್ನ ಜೊತೆ ಪ್ರಾಸಾ2, ಚಾಸಾ-3, 5 ಮತ್ತು ಪೋಲೀಸರು ಬಂದಿದ್ದರು. ಮಹಜರ್ ಮಾಡಲು ಹೋಗುವಾಗ ನಾನು ಎಷ್ಟು ಗಂಟೆಗೆ ಠಾಣೆಯಿಂದ ಹೊರಟಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಆದರೆ ನಾನು ಕಾರಿನಲ್ಲಿ ಹೋಗಿರುತ್ತೇನೆ. ಪೋಲೀಸರು ರಾತ್ರಿ 9.15 ರಿಂದ 9.45 ರವರೆಗೂ ಮಹಜರ್ ಮಾಡಿರುತ್ತಾರೆ. ಅಪಘಾತ ನಡೆದ ಸ್ಥಳದಲ್ಲಿ ವಿದ್ಯುತ್ ದೀಪ ಇರಲಿಲ್ಲ ಎಂದರೆ ಪೋಲೀಸರು ಅವರ ಜೀಪ್ನಿಂದ ಬರುವ ಬೆಳಕಿನಿಂದ ಮಹಜರ್ ಮಾಡಿರುತ್ತಾರೆ. ಮಹಜರ್ ಮಾಡಲು ನನ್ನ ಜೊತೆ ಬಂದಿದ್ದ 4 ಜನರಲ್ಲಿ ಇಬ್ಬರು ನನ್ನ ಸಂಬಂಧಿಕರು. ಇನ್ನಿಬ್ಬರು ನನ್ನ ಸ್ನೇಹಿತರು. ಸ್ಥಳ ಮಹಜರ್ ಮಾಡುವಾಗ ನಮ್ಮನ್ನು ಹೊರತುಪಡಿಸಿ ಇನ್ನೂ ಇಬ್ಬರು ಮೂವರು ಇದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ಅಪಘಾತ ನಡೆದ ಸ್ಥಳದ ಚೆಕ್ಕು ಬಂಧಿ ನನಗೆ ಗೊತ್ತಿದೇಯಾ ಎಂದರೆ ನಾಲ್ಕು ದಿಕ್ಕುಗಳು ಸಹ ಗೊತ್ತಿಲ್ಲ. ಉತ್ತರಕ್ಕೆ ತಿಪ್ಪಗೊಂಡನಹಳ್ಳಿಯ ಕೆರೆ, ದಕ್ಷಿಣಕ್ಕೆ ಸಣ್ಣದಾದ ಒಂದು ಸೇತುವೆ ಇದೆ, ಪೂರ್ವಕ್ಕೆ ಬೆಂಗಳೂರು - ಮಾಗಡಿ ರಸ್ತೆ ಇದೆ ಮತ್ತು ಪಶ್ಚಿಮಕ್ಕೆ ಒಂದು ಊರು ಇದೆ. ನಿಪಿ-2 ರಂತೆ ಪಂಚನಾಮೆ ಮಾಡುವಾಗ ಪೋಲೀಸರು ಕಾರು ಮತ್ತು ಅದರ ಬಿಡಿಭಾಗಗಳನ್ನು ಅಮಾನತ್ತು ಮಾಡಿರುತ್ತಾರೆ. ನಿಪಿ-2 ನ್ನು ಪೋಲೀಸರು ಠಾಣೆಯಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಸಂಪೂರ್ಣವಾಗಿ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-2 ಕ್ಕೆ ನನ್ನ ಜೊತೆ ನಾಯಕ್ ಎಂಬುವವರು ಸಹಿ ಮಾಡಿರುತ್ತಾರೆ. ಮೃತ ನಾರಾಯಣಪ್ಪನವರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳ ದೂರನ್ನು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ಪೋ. ಠಾಣೆಯಲ್ಲಿ ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿಯು

ಅತಿವೇಗ ಮತ್ತು ಅಜಾಗರೂಕತೆಯಿಂದ ಬಸ್ಸನ್ನು ಚಾಲನೆ ಮಾಡದೇ ಇದ್ದರೂ ಸಹ ನಾನು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ :971/2018**
**ಚಾಸಾ :- 02 / ಪ್ರಾಸಾ :- 02**

| | |
|---|---|
| ಹೆಸರು | **ಜಯಪ್ಪ** |
| ತಂದೆಯ ಹೆಸರು | **ಚೌಡಪ್ಪ** |
| ವಯಸ್ಸು | **56** |
| ಉದ್ಯೋಗ | **ವ್ಯಾಪಾರ** |
| ವಿಳಾಸ | **ಹುಳಿಮಾವು** |

**ದಿನಾಂಕ: 15-06-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಸುಮಾರು 6 ವರ್ಷಗಳ ಹಿಂದೆ ಸಂಜೆ 6.20 ರ ಸಮಯದಲ್ಲಿ ನನಗೆ ಸಾರ್ವಜನಿಕರು ಕರೆ ಮಾಡಿ ಮೃತ ನಾರಾಯಣಪ್ಪನನವರಿಗೆ ಮಾಗಡಿ ರಸ್ತೆಯಲ್ಲಿ ಅಪಘಾತವಾಗಿದೆ ಎಂದು ತಿಳಿಸಿದರು. ನಾನು, ಪ್ರಾಸಾ-1 ಮತ್ತು ಚಾಸಾ-3 ರವರು ಅಪಘಾತ ನಡೆದ ಸ್ಥಳಕ್ಕೆ ಹೋಗಿ ನೋಡಿದಾಗ ಬಸ್ಸು ಮತ್ತು ಕಾರಿನ ನಡುವೆ ಅಪಘಾತವಾಗಿರುತ್ತದೆ. ಬಸ್ಸು ಅತಿವೇಗದಿಂದ ಬಂದು ಕಾರಿಗೆ ಡಿಕ್ಕಿ ಪಡಿಸಿದೆ ಎಂದು ತಿಳಿದುಕೊಂಡೆವು. ನಾರಾಯಣಪ್ಪನವರು ಅಪಘಾತ ನಡೆದ ಸ್ಥಳಕಲ್ಲಿಯೇ ಮೃತಪಟ್ಟಿರುತ್ತಾರೆ ಅವರನ್ನು ಅಸ್ಪತ್ರೆಗೆ ಕರೆದುಕೊಂಡು ಹೋದೆವು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಈಗ ನನಗೆ ನಿಪಿ-5 ಮತ್ತು 6 ನ್ನು ತೋರಿಸಿದ್ದು, ಸದರಿ ಫೋಟೊದಲ್ಲಿ ಇರುವ ಬಸ್ಸು ಅಪಘಾತವನ್ನು ಮಾಡಿರುತ್ತದೆ. ಈಗ ನನಗೆ ನಿಪಿ-3 ಮತ್ತು 4 ನ್ನು ತೋರಿಸಿದ್ದು, ಅದರಲ್ಲಿ ಇರುವ ವಾಹನವೇ ಅಪಘಾತಕ್ಕೆ ಒಳಗಾಗಿರುತ್ತದೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖಿವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿ.14-12-2017 ರಂದು ಸಂಜೆ 5.45 ರ ಸಮಯದಲ್ಲಿ ಸಾವನದುರ್ಗ ದೇವಸ್ಥಾನದಿಂದ ಬೆಂಗಳೂರು ಕಡೆಗೆ ಮಾರುತಿ 800 ಕಾರ್ ನಂ. ಕೆಎ-03-ಪಿ-4731 ರಲ್ಲಿ ಹೋಗುತ್ತಿದ್ದ ನಾರಾಯಣಪ್ಪನವರಿಗೆ ಬೆಂಗಳೂರು ಕಡೆಯಿಂದ ಮಾಗಡಿ ಕಡೆಗೆ ಬರುತ್ತಿದ್ದ ಬಸ್ ಸಂ. ಕೆಎ-09-ಎ-6021 ಅತಿವೇಗ ಅಜಗರೂಕತೆಯಿಂದ ಯಾವುದೋ ವಾಹನವನ್ನು ಓವರ್ ಟೇಕ್ ಮಾಡಲು ಹೋಗಿ ನಾರಾಯಪ್ಪನವರ ಕಾರಿಗೆ ಮುಖಾಮುಖಿ ಡಿಕ್ಕಿ ಪಡಿಸಿದರು ಎಂದರೆ ಸರಿ. ಸದರಿ ಅಪಘಾತದಿಂದ ಮೃತ ನಾರಾಯಪ್ಪನವರ ಕಾರು ಜಖಂ ಆಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲು :- ಆರೋಪಿ ಪರ ಶ್ರೀ. ಜಿ. ಹೆಚ್. ಎಂ, ವಕೀಲರಿಂದ :-**

ಸದರಿ ಪ್ರಕರಣದ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಯಾವ ದಿನಾಂಕದಂದು ನಾನು ಹೇಳಿಕೆಯನ್ನು ನೀಡಿದ್ದೇನೆ ಎಂದು ನನಗೆ ಗೊತಿಲ್ಲ. ಆದರೆ 6 ವರ್ಷಗಳ ಹಿಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಪ್ರಕರಣದ ಬಗ್ಗೆ ಯಾರು ಕರೆ ಮಾಡಿ ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಘಟನೆ ನಡೆದ ಸಮಯದಲ್ಲಿ ನಾನು ಹುಳಿಮಾವು ಗ್ರಾಮದಲ್ಲಿ ಇದ್ದೆ. ನಾನು ಘಟನೆ ನಡೆದ ಸ್ಥಳಕ್ಕೆ ರಾತ್ರಿ 8 ರಿಂದ 8.30 ರ ಸಮಯದಲ್ಲಿ ಬಂದಿರುತ್ತೇನೆ. ಘಟನೆ ನಡೆದ ಸ್ಥಳಕ್ಕೆ ನನ್ನ ಜೊತೆ ಪ್ರಾಸಾ1, ಚಾಸಾ-3, 5 ಮತ್ತು 7 ರವರು ಕಾರಿನಲ್ಲಿ ಬಂದರು. ಅಪಘಾತ ನಡೆದ ಸ್ಥಳವು ತಿರುವಿನಿಂದ ಕೂಡಿದೆ

ಎಂದರೆ ಸರಿ. ಮೃತ ನಾರಾಯಪ್ಪನವರನ್ನು ನಾವುಗಳು ರಾತ್ರಿ 9 .30 ರಿಂದ 9.45 ಸಮಯಕ್ಕೆ ಆಸ್ಪತ್ರೆಗೆ ಸೇರಿಸಿದ್ದೆವು. ಯಾವ ದಿನಾಂಕ ಮತ್ತು ತಾರೀಖಿನಂದು ಅಪಘಾತವಾಗಿದೆ ಎಂದು ನನಗೆ ಗೊತ್ತಿಲ್ಲ. ಬಸ್ಸು ಮತ್ತು ಕಾರಿನ ನಡುವೆ ಅಪಘಾತವಾಗಿರುತ್ತದೆ. ಸದರಿ ಬಸ್ಸು ಮತ್ತು ಕಾರಿನ ಸಂಖ್ಯೆ ನನಗೆ ಗೊತ್ತಿಲ್ಲ. ಮೃತ ನಾರಾಯಣಪ್ಪನವರು ನನ್ನ ದೊಡ್ಡಪ್ಪನ ಮಗ. ಮೃತ ನಾರಾಯಣಪ್ಪನವರು ನನ್ನ ದೊಡ್ಡಪ್ಪನ ಮಗನಾದ ಕಾರಣ ಅವರ ಕುಟಂಬಕ್ಕೆ ಪರಿಹಾರ ಬರಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಮತ್ತು ಸಾರ್ವಜನಿಕರು ಹೇಳಿದ ಆಧಾರದ ಮೇಲೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**